ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

C.C.No.867/2015
CW-2 PW-1

ಸಾಕ್ಷಿದಾರರ ಹೆಸರು - ಮೋಶಿನ ಅಬ್ದುಲಮಜಿದ ಹೀರೆಕೋಡಿ

ವಯಸ್ಸು - 36 ವರ್ಷ

ಉದ್ಯೋಗ - ಸಮಾಜ ಸೇವಕ

ಸಾಕೀನ - ಗೋಕಾಕ

ಸಾಕ್ಷಿಗೆ ದಿನಾಂಕ **17-07-2023** ರಂದು ಪ್ರಮಾಣ ವಚನ ಬೋಧಿಸಸಲಾಯಿತು.
ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-4 ರವರ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇರುವುದಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಗೆ ರೇಡ ಪಂಚನಾಮೆ ತೋರಿಸಿದ್ದು ಸಾಕ್ಷಿಯ ಅದರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಹೀಗಾಗಿ ಸದರಿ ರೇಡ ಪಂಚನಾಮೆಗಳನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1-ಎ ಅಂತಾ ಗುರುತಿಲಾಯಿತು. ನಾನು ನಿಪಿ-1 ಎಲ್ಲಿ ಯಾವಾಗ ಏಕೆ ಸಹಿ ಮಾಡಿರುತ್ತೇನೆ ಎಂಬುಹುದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ಪಂಚನಾಗಲು ಕರೆಸಿಲ್ಲ. ನನ್ನ ಸಮಕ್ಷಮ ರೇಡ್ ಮಾಡಿಲ್ಲ, ಯಾವುದೆ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 24-12-2014 ರಂದು ನನ್ನನ್ನು ಮತ್ತು ಚಾಸಾ-3 ರವರನ್ನು ಗೋಕಾಕಿನ ಲಕ್ಷ್ಮಿ ಲಾಡ್ಜ ನಲ್ಲಿ ವೈಶಾವಾಟಿಕೆ ಮಾಡುತ್ತಿದ್ದಾರೆ ಎನ್ನುವ ಮಾಹಿತಿ ತಮಗೆ ಬಂದಿರುತ್ತದೆ ಎಂದು ತಿಳಿಸಿ ಹಾಗೂ ನನ್ನನ್ನು ಹಾಗೂ ಚಾಸಾ-3 ರವರನ್ನು ಪಂಚರಾಗಲು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-3 ರವರು ಒಪ್ಪಿ ಕೊಂಡ ಮೇರೆಗೆ ಪೊಲೀಸರು ನಮ್ಮ ಘಟನಾ ಸ್ಥಳಕ್ಕೆ ಕೆರೆದುಕೊಂಡು ಹೋಗಿ ರೇಡ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಲಕ್ಷ್ಮಿ ಲಾಡ್ಜನ ರೂಂ 13 ರಲ್ಲಿ ಈ ದಿನ ನ್ಯಾಯಾಲಯ ಮುಂದೆ ಇರುವ ಆರೋಪಿ ನಂ.1 ರವರು ಆರೋಪಿ ನಂ.2 ಮತ್ತು ಚಾಸಾ-10 ರವರಿಗೆ ರೂ.3 ರನ್ನು ನೀಡಿ ಅವರಿಬ್ಬರಿಗೂ ವೈಶಾವಾಟಿಕೆ ಮಾಡಲು ಕೋಣೆ ಕೊಟ್ಟಿದ್ದ ಎಂದರೆ ಸರಿಯಲ್ಲ. ನಾವು ಸದರಿ ಕೋಣೆಗೆ ಹೋದಾಗ ಆರೋಪಿ ನಂ.2 ಮತ್ತು ಚಾಸಾ-10 ರವರನ್ನು ಅರೆ ನಗ್ನಾವಸ್ಥೆಯಲ್ಲಿ

ಇರುವುದನ್ನು ಕಂಡು ಪೋಲಿಸರು ನಮ್ಮ ಸಮಕ್ಷಮ ನಿಪಿ-1 ರಂತೆ ರೇಡ ಪಂಚನಾಮೆಯನ್ನು ಸಾಯಂಕಾಲ 4.35 ರಿಂದ 5.35 ರವರೆಗೆ ಘಟನಾ ಸ್ಥಳದಲ್ಲಿ ಮಾಡಿ ಆರೋಪಿ ನಂ.2 ರವರ ಕಡೆಯಿಂದ ಒಂದು ಸ್ಯಾಮಸಂಗ ಮೊಬೈಲ್, ರೂ.500/- ನಗದು ಹಣ ಹಾಗೂ ಒಂದು ಲಾಡ್ಜನ ರೆಜಿಸ್ಟರ ಪುಸ್ತಕ ಅಮಾನತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ನಿಪಿ-1 ರಂತೆ ರೇಡ ಪಂಚನಾಮೆ ಮಾಡಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿ ಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲಃ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.